ಶ್ರೀ ಬಿ ಸ್ವಾಮಿರಾವ್.— ಅಧ್ಯಕ್ಷರೇ, ನಾನು ಇದೇ ವಿಷಯದ ಬಗ್ಗೆ ಒಂದು ವಾರದ ಹಿಂದೆ ನಿಯಮ ೩೩ರ ಕೆಳಗೆ ಕೇಳಿದ್ದೆ. ನಾಟಾ ಮತ್ತು ಗಂಧದ ಮರವನ್ನು ಕಳ್ಳತನದಿಂದ ತೆಗೆಯಲ್ಪಟ್ಟ ಬಂದವರನ್ನು ಪ್ರಾಣಿಗಳು ಕೊಂದಂ ಹಾಕಿವೆ ಎಂದು ಅಲ್ಲಿಯ ಅಧಿಕಾರಿಗಳು ಒಂದು ರಿಪೋರ್ಟನ್ನು ಕಳುಹಿಸಿದ್ದಾರೆ. ಅದಕ್ಕೆ ಇಲ್ಲಿಗೆ ಬಂದಿರತಕ್ಕಂಥ ಹೇಳಿಕೆ ಬೇರೆ ಇದೆ. ಶಿವಮೊಗ್ಗದ ಡಿ.ಎಫ್.ಓ. ಅವರೇ ಒಂದು ಲೋಡ್ ಸಾಗುವಾನಿ ಮರವನ್ನು ಸಾಗಿಸಿಕೊಂಡು ಹೋಗುವಾಗ ಅಲ್ಲಿಯ ಹಳ್ಳಿಯವರೇ ಅದನ್ನು ಹಿಡಿದಿದ್ದಾರೆ. ಅದು ಮಾನ್ಯ ಮಂತ್ರಿಯವರಿಗೆ ಗೊತಿ ದೆಯೇ ? ಬಡ ರೈತರ ಮೇಲೆ ಏನಾದರೂ ಸುಳ್ಳು ರಿಪೋರ್ಟ್ ಕೊಡುವ ಈ ಅಧಿಕಾರಿಗಳ ಬಗ್ಗೆ ತನಿಖೆ ನಡೆಸುತ್ತೀರಾ ?

ಅಧ್ಯಕ್ಷರು.— ಜನರೇ ಅಧಿಕಾರಿಯು ಮಾಡುತ್ತಿದ್ದ ಕಳ್ಳತನವನ್ನು ಹಿಡಿದಿದ್ದಾರೆ ಎಂದು ಹೇಳಿದ್ದಾರೆ. ನೀವು ಏನು ಹೇಳುತ್ತೀರಿ ?

ಶ್ರೀ ಜಿ. ಎಸ್. ಬಾಗಲಕೋಟ್.— ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟರೆ ಆ ಬಗ್ಗೆ ಅಧಿಕಾರಿಗಳಿಂದ ವಿವರಣೆಯನ್ನು ಪಡೆಯುತ್ತೇನೆ.

ಶ್ರೀ ಬಿ. ಸ್ವಾಮಿರಾವ್.— ಅರಣ್ಯ ಇಲಾಖೆ ಮಂತ್ರಿಯವರಿಗೆ ಇಲಾಖೆಯ ವಿಚಾರ ಗೊತ್ತಿಲ್ಲವೆ ? ಇಲ್ಲದಿದ್ದರೆ ನಾನು ಕೊಡುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್.— ಮಾನ್ಯ ಸದಸ್ಯರು ವಿವರಗಳನ್ನು ಕೊಡಲಿ, ಆ ಬಗ್ಗೆ ವಿಚಾರಣೆ ಮಾಡಿಸುತ್ತೇನೆ.

Merger of K-Tex with K.S.H.D. Corporation

1507. SRI R. VENKATARAMAIAH (Mulbagal).— Will the Minister for ports, fisheries and small scale Industries be pleased to state.

a) The number of weaker and master weavers in the State in the Cooperative field and non-Coperative field?

b) The total production of handloom cloth in K-tex and KHDC from 1984-85 till date;

c) Whether it is a fact that there are two parallel bodies in K-tex and KHDC in the handloom sector;

d) If so, the reasons therefore;

e) Whether there is any proposals before the Government to merge K-Tex in Karnataka State Co-operative Apex Society with the Karnataka Handloom Development Corporation to achieve better results?

f) The measures contemplated by the Government to dispose off the accumulated stocks of handloom cloth in these two bodies?

SRI M. RAGUPATHI (Minister for ports, Fisheries and Small Scale Industries)

As per 1976 Census

a) No. of Weavers	:	76629
b) No. of Weavers under non-coop. filds	:	40727
c) No. of Weavers under non-coop. sector including Master Weavers	:	35902

b) (Production in crores)

Year	KHDC Rs.	K-tex (Rupees)	Quantity in lakh metres
1984-85	9.54	1.15 *	147.62
1985-86	13.15	1.27	205.84
1986-87	17.99	1.11	297.59
1987-88	19.86	0.91 *	

* (Up to April '88)

10 months of Cooperative year.

c) Yes.

d) K-Tex is the apex body for the Primary societies working in the Co operative Sector.

The KHDC is expected to promote, aid and assist the rehabilitation, growth and development of handloom industry, particularly of that sector which is outside the co-operative sector.

e) No.

f) The State Government has allowed special rebate to clear the accumulated stocks, in addition to the rebate allowed on 50 : 50 basis with the Government of India.

ಶ್ರೀ ಜಿ. ಎಸ್. ಆಚಾರ್. ಮಾನ್ಯ ಅಧ್ಯಕ್ಷರೇ, ನಿಖರ ಗಣತಿಯ ಪ್ರಕಾರ ಸಂಘಗಳ ನೇಕಾರರ ಸಂಖ್ಯೆ ೪೦ ಸಾವಿರ. ಹೊರಗಡೆ ವಲಯದವರ ಸಂಖ್ಯೆ ೩೫೯೦೦, ಅಂದರೆ ಸಹಕಾರ ಸಂಘಗಳ ವಲಯಕ್ಕೇ ಎಲ್ಲಾ ನೇಕಾರರನ್ನೂ ತರುವ ಪ್ರಯತ್ನ ಸರ್ಕಾರ ಮಾಡುತ್ತದೆಯೇ ? ಎರಡನೆಯದು, ರಾಜ್ಯ ಹತ್ತಿ ಕೈಮಗ್ಗ ನೇಕಾರರ ಸಹಕಾರ ಸಂಘ ಮತ್ತು ಕೈಮಗ್ಗ ಅಭಿವೃದ್ಧಿ ನಿಗಮ ಎಂದು ಎರಡು ಸಂಸ್ಥೆಗಳಿವೆ ಇದರಿಂದ ಕೋ ಆಪರೇಟಿವ್ ಸೆಕ್ಟಾರ್ ನೇಕಾರರು ಮತ್ತು ಹೊರಗಡೆ ಇರುವ ನೇಕಾರರಿಗೆ ಎಂದು ಪ್ರತ್ಯೇಕಿಸಿದ ಹಾಗೆ ಆಗಂತ್ತದೆ. ಹಾಗೆಯೇ ಉತ್ಪಾದನೆಯಲ್ಲಿ, ನೆರವು ನೀಡುವುದರಲ್ಲಿ ಕೂಡ ವ್ಯತ್ಯಾಸಗಳಾಗಬಹುದು. ಆದ್ದರಿಂದ ಎರಡನ್ನೂ ವಿಲೀನ ಮಾಡಿ ಒಂದೇ ಸಂಸ್ಥೆಯ ಕೆಳಗೆ ತರುವ ಪ್ರಯತ್ನ ಮಾಡಲಾಗುವುದೇ ? ಮೂರನೆಯದು, ಕೇಂದ್ರ ಸರ್ಕಾರದೊಂದಿಗೆ ರಾಜ್ಯ ಸರ್ಕಾರವು ಶೇಕಡ ೫೦ : ೨೦ ಪ್ರಮಾಣದಲ್ಲಿ ರಿಯಾಯಿತಿ ನೀಡಲಾಗುವುದೆಂದಿದ್ದಾರೆ. ಆದರೆ ಈ ರಿಯಾಯಿತಿ ಡಿಸಿಸಿ ಬ್ಯಾಂಕ್ ಮೂಲಕ ಇರುವ ಸೊಸೈಟಿಗಳಿಗೆ ಪಾವತಿ ಆಗಿಲ್ಲ, ಅನೇಕ ವರ್ಷಗಳಿಂದ ಸರ್ಕಾರ ಮಟ್ಟದಿಂದ ತಡೆಹಿಡಿಯಲ್ಪಟ್ಟಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ನೇಕಾರರು ಹೆಚ್ಚಿಗೆ ಬಡ್ಡಿ ದರದಲ್ಲಿ ಸಾಲ ಪಡೆದು ಆ ಸಂಸ್ಥೆಗಳು ಕುಸಿದು ಬೀಳುವಂಥ ಪರಿಸ್ಥಿತಿ ಬಂದಿದೆ. ಇದಕ್ಕೆ ಉತ್ತರ ಹೇಳುತ್ತೀರಾ ?

ಶ್ರೀ ಎಂ. ರಘುಪತಿ,— ನೇಕಾರರು ಸಾಲ ಪಡೆದಿರುವ ಬಗ್ಗೆ ಮಾಹಿತಿ ನನ್ನ ಬಳಿ ಇಲ್ಲ. ಅದನ್ನು ಪಡೆದುಕೊಂಡು ಸದಸ್ಯರಿಗೆ ಕಳಿಸಿಕೊಡುತ್ತೇನೆ. ಎರಡೂ ಸಂಸ್ಥೆಗಳನ್ನು ಒಂದು ಮಾಡುವಿರಾ ಎಂದ ಹೇಳಿದ್ದಾರೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಪಕ್ಕದ ತಮಿಳುನಾಡಿನಲ್ಲಿ ಆ ವ್ಯವಸ್ಥೆ ಇದೆ ಅದನ್ನು ಇಲ್ಲಿಯೂ ಅಳವಡಿಸುವುದಕ್ಕೆ ಸಾಧ್ಯವೇ ಎಂಬ ಬಗ್ಗೆ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳಿಸಿ

ವರದಿ ತರಿಸಿಕೊಂಡು ಅದು ಲಾಭದಾಯಕ ಎನಿಸಿದರೆ ವಿಲೀನ ಮಾಡಲು ಪರಿಶೀಲನೆ ಮಾಡುತ್ತೇನೆ. ಎಲ್ಲಾ ಸಂಸ್ಥೆಗಳನ್ನು ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ತರಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಎಲ್ಲಾವನ್ನು ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ತರಬೇಕೆನ್ನುವುದು ಸರಕಾರದ ಉದ್ದೇಶವಾಗಿದೆ. ಹಲವಾರು ಜನ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಬಾರದೇ ಇರುವುದರಿಂದ ಅವರಿಗೆ ಸಹಾಯ ಮಾಡಬೇಕೆಂದು ಕರ್ನಾಟಕ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅನ್ನು ಸ್ಥಾಪನೆ ಮಾಡಿರುವುದು.

ಶ್ರೀ ಜಿ. ಎಸ್. ಆಚಾರ್.— ಮೂಲ ಪ್ರಶ್ನೆಯ ಉತ್ತರದಲ್ಲಿ ವಿಲೀನಗೊಳಿಸುವ ಪ್ರಸ್ತಾಪವಿಲ್ಲ ವೆಂದು ಇದೆ. ಈಗ ಅಧಿಕಾರಿಗಳನ್ನು ತಮಿಳುನಾಡಿಗೆ ಕಳಿಸಿಕೊಟ್ಟು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ ಇದರಲ್ಲಿ ಯಾವುದನ್ನು ನಂಬುವುದು.

ಶ್ರೀ ಎಂ. ರಘುಪತಿ.— ಈಗ ಸಧ್ಯಕ್ಕೆ ವಿಲೀನದ ಪ್ರಶ್ನೆ ಇಲ್ಲ. ಮಾದ್ರಾಸಿಗೆ ಹೋಗಿ ಅವರು ಈ ಪದ್ಧತಿ ಅಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ವರದಿಯನ್ನು ಕೊಟ್ಟು ಆ ರೀತಿ ನಮಗೆ ಕಂಡು ಬಂದರೆ ಪುನರ್ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಟೋಟಲ್ ನಂಬರ್ ಆಫ್ ವೀವರ್ಸ್ ಇನ್ ಕೋ-ಆಪರೇಟೀವ್ ಸೆಕ್ಟಾರಿನಲ್ಲಿ ೭೬,೬೨೯ ಇದ್ದಾರೆ ನಾನ್ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ೪೦೭೨೭, ನಾನ್ ಕೋ-ಆಪರೇಟೀವ್ ಸೆಕ್ಟಾರ್ ಇನ್‌ಕ್ಲೂಡಿಂಗ್ ಮಾಸ್ಟರ್ ವೀವರ್ಸ್ ೫೫,೯೦೨ ಇದ್ದಾರೆ. ಇವತ್ತು ಅನೇಕ ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಕೆಲಸ ನಡೆಯುತ್ತಿಲ್ಲ. ಇವತ್ತು ಕರ್ನಾಟಕ ಹ್ಯಾಂಡ್ ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ್ನಿಂದ ಏನು ಪ್ರಾಜೆಕ್ಟ್‌ಗಳು ಏನು ನಡೆಯುತ್ತಿವೆ, ಗುರುಮಿಠ್‌ಕಲ್, ಆಳಂದ್, ಬನಹಟ್ಟಿ, ರಬಕವಿ ಮುಂತಾದ ಕಡೆಗಳಲ್ಲಿ ನಡೆಯುತ್ತಿವೆ, ಅಲ್ಲಿ ಅವರಿಗೆ ನೂಲನ್ನು ಏನು ಸಪ್ಲೈ ಮಾಡುತ್ತಿದ್ದೀರಿ ಅದು ನಿಂತು ಹೋಗಿದೆ. ಅವರು ಬಹಳ ಕಷ್ಟದಲ್ಲಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ನಾನು ಕಾಗದ ಪತ್ರಗಳನ್ನು ಬರೆದೆ. ಅವರಿಗೆ ಕೆಲಸ ಬೇಕು ಇಂತಹ ಪರಿಸ್ಥಿತಿಯಲ್ಲಿ ಅವರು ಇರುವಾಗ ನೀವು ನೂಲು ಕೊಡುವುದನ್ನು ನಿಲ್ಲಿಸಿದರೆ ಅವರು ಊರು ಬಿಟ್ಟು ಬಾಂಬೆ, ಬಿವಂಡಿ, ಆಕಡೆಗೆ ಹೋಗುತ್ತಿದ್ದಾರೆ. ಅವರಿಗೆ ರೆಗ್ಯುಲರ್ ಆಗಿ ನೂಲು ಸಪ್ಲೈ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ಇದನ್ನು ಮಾಡದಿದ್ದರೆ ಕೊನೆಗೆ ಅನ್ ಎಂಪ್ಲಾಯ್ಡ್ ಆಗಿ ಊರಿನಲ್ಲಿ ದೊಡ್ಡ ಜಳುವಳಿ, ಸತ್ಯಾಗ್ರಹಗಳನ್ನು ಕೆಲವು ಕಡೆ ಮಾಡುತ್ತಿದ್ದಾರೆ. ಆದರೆಲ್ಲಿ ಕೆಲವು ಕಡೆಗಳಲ್ಲಿ ಆಗಿರುವುದು ಮಾತ್ರ ಸರಕಾರದ ನೋಟೀಸಿಗೆ ಬಂದಿದೆ ಕೆಲವು ಕಡೆಗಳ ಬಗ್ಗೆ ನೋಟೀಸ್ ಸರಕಾರಕ್ಕೆ ಬಂದಿಲ್ಲ. ಅವರಿಗೆ ರೆಗ್ಯುಲರ್ ಆಗಿ ನೂಲನ್ನು ಸಪ್ಲೈ ಮಾಡುವುದಕ್ಕೆ ಏನು ಕಾರ್ಯಕ್ರಮಂತೆಗೆದುಕೊಳ್ಳುತ್ತೀರಿ. ಇನ್ನು ಆಕ್ಯುಮಲೇಟೆಡ್ ರಿಬೇಟ್ ಏನು ಇದೆ ಅದನ್ನು ಅನೇಕ ಸೊಸೈಟಿಗಳವರು ಕ್ಲೇಮ್ ಮಾಡಿದ್ದಾರೆ, ಆದರೆ ಹಣವಿಲ್ಲವೆಂದು ರಿಲೀಸ್ ಮಾಡಲಿಲ್ಲ ಇವರಿಗೆ ಸರಕಾರ ಕೊಡತಕ್ಕಂಥಾದ್ದು ಬಾಕಿ ಎಷ್ಟು ಹಣವಿದೆ ಇದನ್ನು ಯಾವಾಗ ಕೊಡುತ್ತೀರಿ.

ಶ್ರೀ ಎಂ. ರಘುಪತಿ.— ರಿಬೇಟ್ ಹಣ ಎಷ್ಟು ಬಾಕಿ ಇದೆಯೆಂದು ವಿವರ ನನ್ನ ಹತ್ತಿರ ಇಲ್ಲ ತರಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅದನ್ನು ರಿವೈಸ್ ಮಾಡಬೇಕು. Unless you have got some idea to help them, how you will help ?

ಶ್ರೀ ಎಂ. ರಘುಪತಿ.— ಸಹಾಯ ಮಾಡಬೇಕೆಂಬುದು ಸರಕಾರದ ಉದ್ದೇಶವಾಗಿದೆ, ಅವರಿಗೆ ಏನು ಹಣ ಪಾವತಿ ಮಾಡಬೇಕು ಅದನ್ನು ಅತಿ ಶೀಘ್ರವಾಗಿ ಪಾವತಿ ಮಾಡುವುದಕ್ಕೆ ವಿಚಾರ ಮಾಡುತ್ತೇನೆ. ನೂಲನ್ನು ಸರಬರಾಜು ಮಾಡುವ ವಿಷಯದಲ್ಲಿ ನಿರ್ದೇಶಕರು, ಅಧಿಕಾರಿಗಳ ಸಭೆ ಕರೆದು ಆದಷ್ಟು ಬೇಗ ನೂಲನ್ನು ಸರಬರಾಜು ಮಾಡುವ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ

ಅಧ್ಯಕ್ಷರು.— ಮಾನ್ಯ ವೀರಯ್ಯ ಸ್ವಾಮಿಯವರೇ, ತಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಎಂ. ವೀರಯ್ಯ ಸ್ವಾಮಿ.— ಇಂತಹ ಪ್ರಶ್ನೆ ಬಂದಾಗ ಮಂಡಿಸಕ್ಕೆ ಹಾಕುತ್ತಾರೆ.

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕಾ ಸಚಿವರು).— ಮಾನ್ಯ ಅಧ್ಯಕ್ಷರೇ, ಇವರ ಪ್ರಶ್ನೆ ಹೀಗಿದೆ.

1) The Public Sector Industries which have sold shares Completes or partly to private individuals, during the last 3 years, Information with regard to dated and amount.

2) Secondly, perso s to whom these Industries share sare sold.

3) The reasons for selling and the names of Industries which have already sold. ಇದು K.S.B.P.ಗೆ ಹೋಗಬೇಕಾದರೆ ಈ ಅವಕಾಶ ಬೇಕಾಗುತ್ತದೆ. ನಮ್ಮಲ್ಲಿ ಖಲ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳು ಇದೆ. ಕಳೆದ ಮೂರು ವರ್ಷದಲ್ಲಿ ಯಾರು ಎಷ್ಟು ಷೇರುಗಳನ್ನು ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ತರಿಸಬೇಕಾಗುತ್ತದೆ. ಜಾಯಿಂಟ್ ಸೆಕ್ಟಾರ್ ಇರಲೀ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಇರಲೀ. ಅವರಿಗೆ ಆರ್ಥಿಕವಾಗಿ ಅನುಕೂಲವಾಗುವುದಾದರೆ ವಾರಾಟ ಮಾಡಿಕೊಳ್ಳುತ್ತಾರೆ, ಯಾರಿಗೆ ವಾರಾಟ ಮಾಡುತ್ತಾರೆಯೋ ಗೊತ್ತಿಲ್ಲ. ಎಲ್ಲಾ ಮಾಹಿತಿಯನ್ನು ತರಿಸಿಕೊಳ್ಳಬೇಕಾದರೆ ಸಮಯಾಗಂತ್ತದೆ. ಅವರುಗಳ ಹೆಸರು ಎಲ್ಲಾ ಕೇಳಿದ್ದಾರೆ. He is entitled to get the reply, but this cannot be given at this short period.

ರಾಜ್ಯ ಸ್ವಾಮ್ಯದ ಕೆ. ಎಸ್. ಐ. ಐ. ಡಿ. ಸಿ. ಉದ್ದಿಮೆಗಳ ಬಗ್ಗೆ

೧೮೩೩. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸ್ವಾಮ್ಯದ ಕೆ.ಎಸ್.ಐ.ಐ.ಡಿ.ಸಿ. ೩೧-೩-೧೯೮೮ರವರೆಗೆ ಬಂಡವಾಳ ಹೂಡಿರುವ ವಿವಿಧ ಉದ್ದಿಮೆಗಳಾವುವು, (ಪ್ರತಿಯೊಂದರ ಪ್ರತ್ಯೇಕ ವಿವರ ನೀಡುವುದು) ?

ಆ) ಆ ಪೈಕಿ ನಷ್ಟದಲ್ಲಿರುವ ಜಂಟಿ ಸ್ವಾಮ್ಯದ ಉದ್ಯಮಗಳಾವುವು ಮತ್ತು ರೋಗಗ್ರಸ್ಥ ಉದ್ಯಮಗಳಾವುವು ?

ಇ) ೩೧-೩-೧೯೮೮ ರಲ್ಲಿ ಕೆ.ಎಸ್.ಐ.ಐ.ಡಿ.ಸಿ.ಯು ಹೊಂದಿರುವ ಲಾಭ ಮತ್ತು ನಷ್ಟದ ಪೊತ್ತವೆಷ್ಟು (ವಿವರ ನೀಡುವುದು) ?

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ವಿವಿಧ ಉದ್ಯಮಗಳಲ್ಲಿ ನಿಗಮವು ೩೧-೩-೧೯೮೮ರ ಅವಧಿಯವರೆವಿಗೂ ೨೧೧೮.೦೪ ಲಕ್ಷ ರೂ.ಗಳನ್ನು ಬಂಡವಾಳವನ್ನಾಗಿ ತೊಡಗಿಸಿರುತ್ತದೆ. ಪ್ರತಿಯೊಂದರ ಪ್ರತ್ಯೇಕ ವಿವರಗಳನ್ನು ಅನುಬಂಧ ೧ರ ಪಟ್ಟಿಯಲ್ಲಿ ನೀಡಲಾಗಿದೆ.

ಆ) ನಷ್ಟದಲ್ಲಿರುವ ಜಂಟಿ ಸ್ವಾಮ್ಯದ ಉದ್ಯಮಗಳ ಮತ್ತು ರೋಗಗ್ರಸ್ಥ ಉದ್ಯಮಗಳ ಪಟ್ಟಿಯನ್ನು ಅನುಬಂಧ-೨ರ ಪಟ್ಟಿಯಲ್ಲಿ ನೀಡಲಾಗಿದೆ.

ಇ) ೩೧-೩-೧೯೮೮ರ ಅವಧಿಗೆ ನಿಗಮವು ಮಾಡಿರುವ ಲಾಭವನ್ನು ಈ ಕೆಳಗೆ ತೋರಿಸಲಾಗಿದೆ.

	(ರೂ.ಲಕ್ಷಗಳಲ್ಲಿ)
ತೆರಿಗೆ ಪೂರ್ವ ಲಾಭ	೨೯೬.೯೮
ಪರಮಾನ ತೆರಿಗೆ ಏರ್ಪಾಡು	೫೪.೦೦
ನಿವ್ವಳ ಲಾಭ	೨೪೨.೯೮